# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ವಿದ್ಯಾರಣ್ಯ-೫೮೩ ೨೭೬

### ಅಕ್ಟೋಬರ್ ೦೩, ೨೦೨೩ರ ಮಂಗಳವಾರದಂದು ನಡೆದ ಕಾರ್ಯಕಾರಿ ಸಮಿತಿ ೨೨೧ನೇ ಸಭೆಯ ನಡವಳಿಗಳು

| | |
|---|---|
| ೦೧. ಡಾ. ಡಿ.ವಿ. ಪರಮಶಿವಮೂರ್ತಿ, ಮಾನ್ಯ ಕುಲಪತಿಗಳು, ಕವಿಹಂ | : ಅಧ್ಯಕ್ಷರು |
| ೦೨. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ಡಾ. ಎಫ್.ಟಿ. ಹಳ್ಳಿಕೇರಿ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೫. ಡಾ. ಚಲುವರಾಜು, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೬. ಡಾ. ಶಿವಾನಂದ ಎಸ್. ವಿರಕ್ತಮಠ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೦೭. ಡಾ. ಶೈಲಜ ಇಂ. ಹಿರೇಮಠ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೦೮. ಡಾ. ದಿನೇಶ್ ಕೆ., ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |

ಸರಕಾರದಿಂದ ನಾಮನಿರ್ದೇಶನಗೊಂಡ ೮ ಸದಸ್ಯರ ಅವಧಿಯು ಡಿಸೆಂಬರ್ ೧೦, ೨೦೨೨ಕ್ಕೆ ಪೂರ್ಣಗೊಂಡಿರುತ್ತದೆ. ಈ ೮ ಸ್ಥಾನಗಳಿಗೆ ಸರ್ಕಾರದಿಂದ ಹೊಸ ಸದಸ್ಯರ ನಾಮನಿರ್ದೇಶನ ಈವರೆಗೆ ಆಗಿಲ್ಲ. ಆದ್ದರಿಂದ ಈ ೮ ಸದಸ್ಯರ ಸ್ಥಾನಗಳು ಖಾಲಿ ಇವೆ.

| | |
|---|---|
| ೦೯. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |

ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ನಂತರ ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ, ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೧೮.೦೭.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೦ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

**ನಿರ್ಣಯ** : ದಿನಾಂಕ ೧೮.೦೭.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೦ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೧೮.೦೭.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೦ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು. (ಅನುಬಂಧ-೦೨)

**ನಿರ್ಣಯ** : ದಿನಾಂಕ ೧೮.೦೭.೨೦೨೩ರಂದು ನಡೆದ ಕಾರ್ಯಕಾರಿ ಸಮಿತಿಯ ೨೨೦ನೇ ಸಭೆಯ ನಡವಳಿಗಳ ಅನುಪಾಲನಾ ವರದಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೧.೦೧** ಕನ್ನಡ ವಿಶ್ವವಿದ್ಯಾಲಯದ ೩೨ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಆರಂಭಿಸುವ ಕುರಿತು.

**ನಿರ್ಣಯ** : ಕನ್ನಡ ವಿಶ್ವವಿದ್ಯಾಲಯದ ೩೨ನೇ ನುಡಿಹಬ್ಬದ ಪ್ರಕ್ರಿಯೆಗಳನ್ನು ಸಭೆಯು ಪರಿಶೀಲಿಸಿ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

೧. ೩೨ನೇ ನುಡಿಹಬ್ಬದ ಘಟಿಕೋತ್ಸವವನ್ನು ೨೦೨೩ರ ಡಿಸೆಂಬರ್ ೨ ಅಥವಾ ೩ನೇ ವಾರದಲ್ಲಿ ನಡೆಸಲು ಘನತೆವೆತ್ತ ರಾಜ್ಯಪಾಲರ ಹಾಗೂ ಉನ್ನತ ಶಿಕ್ಷಣ ಸಚಿವರ ದಿನಾಂಕವನ್ನು ಕೋರಿ ಪತ್ರ ಬರೆಯುವುದು.

೨. ೩೨ನೇ ನುಡಿಹಬ್ಬದ ಘಟಿಕೋತ್ಸವ ಭಾಷಣಕಾರರನ್ನಾಗಿ (ಮುಖ್ಯ ಅತಿಥಿಗಳು) ಪ್ರೊ. ಬಿ. ತಿಮ್ಮೇಗೌಡ, ಡಾ.ಎಸ್.ಎ. ಕೋರಿ, ಡಾ.ಎಲ್. ಹನುಮಂತಯ್ಯ ಹಾಗೂ ಶ್ರೀಮತಿ ಬಿ. ಜಯಶ್ರೀ ಇವರುಗಳಲ್ಲಿ ಒಬ್ಬರನ್ನು ಆಯ್ಕೆ ಮಾಡುವಂತೆ ಘನತೆವೆತ್ತ ಕುಲಾಧಿಪತಿಗಳನ್ನು ಕೋರಲು ಸಭೆ ತೀರ್ಮಾನಿಸಿತು.

೩. ೩೨ನೇ ನುಡಿಹಬ್ಬದ ನಾಡೋಜ ಆಯ್ಕೆ ಸಮಿತಿಗೆ ಡಾ.ಎ. ಮುರಿಗೆಪ್ಪ (ವಿಶ್ರಾಂತ ಕುಲಪತಿಗಳು, ಕವಿಹಂ), ಡಾ. ಶರಣಪ್ಪ ಹಲಸೆ, ಕುಲಪತಿಗಳು, ಕೆ.ಎಸ್.ಓ.ಯು. ಮೈಸೂರು ಹಾಗೂ ಡಾ. ಅಹಲ್ಯ, ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಇವರುಗಳಲ್ಲಿ ಒಬ್ಬರನ್ನು ಕನ್ನಡ ವಿಶ್ವವಿದ್ಯಾಲಯದ ಪ್ರತಿನಿಧಿ/ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲು ಸಭೆ ಅನುಮೋದನೆ ನೀಡಿತು.

೪. ಕನ್ನಡ ವಿಶ್ವವಿದ್ಯಾಲಯದ ೩೨ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ೧೦ ಮಂದಿ ಸಾಧಕರ ಪಟ್ಟಿಯನ್ನು ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

| | |
|---|---|
| ೧. ಶ್ರೀ ಕುಂ. ವೀರಭದ್ರಪ್ಪ | – ಸಾಹಿತ್ಯ |
| ೨. ಶ್ರೀ ಶಿವರಾಜ ವಿ. ಪಾಟೀಲ | – ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರು, ಸಾಹಿತ್ಯ |
| ೩. ಡಾ. ಎಸ್.ಸಿ. ಶರ್ಮ | – ಶಿಕ್ಷಣ, ತಂತ್ರಜ್ಞಾನ ಮತ್ತು ಸಂಗೀತ |
| ೪. ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರು ಭಾಲ್ಕಿ ಹಿರೇಮಠ | – ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ, ಕೃಷಿ, ಪರಿಸರ |
| ೫. ಶ್ರೀ ವೆಂಕಟೇಶ ಕುಮಾರ್ | – ಸಂಗೀತ–ಕಲೆ |
| ೬. ಡಾ. ಪದ್ಮಿನಿರಾವ್ | – ಖ್ಯಾತ ಮನೋವೈದ್ಯರು ಮತ್ತು ಆಪ್ತಸಲಹೆಗಾರರು |
| ೭. ಡಾ. ಬಿ.ಎ. ವಿವೇಕ ರೈ | – ಶಿಕ್ಷಣ ತಜ್ಞರು |
| ೮. ಡಾ. ಕೆ.ವಿ.ನಾರಾಯಣ | – ಶಿಕ್ಷಣ ತಜ್ಞರು |
| ೯. ಡಾ. ಶಿವರಾಮ ಶೆಟ್ಟಿ ತಲ್ಲೂರು | – ಸಮಾಜಸೇವೆ |
| ೧೦. ಶ್ರೀ ವೆಂಕಣ್ಣ ಚಿತ್ರಗಾರ | – ಕಲೆ–ರಥಶಿಲ್ಪ ಕಲಾವಿದರು |

**೨೨೧.೦೨** ದಿನಾಂಕ ೧೫.೦೯.೨೦೨೩ರಂದು ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳ ಕುರಿತು.

ಟಿಪ್ಪಣಿ : ವಿಶ್ವವಿದ್ಯಾಲಯದ ವಿವಿಧ ವಿಭಾಗಗಳು ಅಗತ್ಯವಿರುವ ಪೀಠೋಪಕರಣ/ಯಂತ್ರೋಪಕರಣ ಹಾಗೂ ಇತರೆ ಸಾಮಗ್ರಿಗಳನ್ನು ಕೋರಿ ಸಲ್ಲಿಸಿದ ಮನವಿಗಳ ಕುರಿತು ದಿನಾಂಕ ೧೫.೦೯.೨೦೨೩ರಂದು ನಡೆದ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೨೧.೦೩** American Institute of Indian Studies (AIIS) ಕ್ಯಾಲಿಫೋರ್ನಿಯದಲ್ಲಿರುವ ವಿದೇಶಿ ಕನ್ನಡ ಸಂಘಗಳ ಒಕ್ಕೂಟದಿಂದ ವಿಶ್ವವಿದ್ಯಾಲಯದ ಅಡಿಯಲ್ಲಿ ಕನ್ನಡ ಕಲಿಕಾ ಕೋರ್ಸ್‌ಗಳನ್ನು (ಡಿಪ್ಲೊಮಾ ಇತರೆ) ನಡೆಸುವ ಕುರಿತು.

ಟಿಪ್ಪಣಿ : American Institute of Indian Studies (AIIS) ಕ್ಯಾಲಿಫೋರ್ನಿಯದಲ್ಲಿರುವ ವಿದೇಶಿ ಕನ್ನಡ ಸಂಘಗಳ ಒಕ್ಕೂಟದಿಂದ ವಿಶ್ವವಿದ್ಯಾಲಯದ ಅಡಿಯಲ್ಲಿ ಕನ್ನಡ ಕಲಿಕಾ ಕೋರ್ಸ್‌ಗಳನ್ನು (ಡಿಪ್ಲೊಮಾ ಇತರೆ) ನಡೆಸಲು ಹಾಗೂ ಈ ಸಂಬಂಧ ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ವಿಷಯ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ಕನ್ನಡ ಕಲಿಕಾ ಕೋರ್ಸ್‌ಗಳನ್ನು (ಡಿಪ್ಲೊಮಾ ಇತರೆ) ನಡೆಸುವ ಸಂಬಂಧ ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳಲು ಅನುಮೋದನೆ ನೀಡಿತು.

**೨೨೧.೦೪** ೨೦೨೧-೨೨ನೇ ಸಾಲಿನ ವಾರ್ಷಿಕ ವರದಿ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ೨೦೨೧-೨೨ನೇ ಸಾಲಿನ ವಾರ್ಷಿಕ ವರದಿಯನ್ನು ಸಿದ್ಧಪಡಿಸಲಾಗಿದ್ದು, ಸದರಿ ವರದಿಯನ್ನು ಸಮಿತಿಯ ಪರಿಶೀಲನೆಗಾಗಿ ಮಂಡಿಸಿದೆ. ನಂತರ ಮುದ್ರಣ ಕಾರ್ಯವನ್ನು ಕೈಗೊಂಡು ಸರ್ಕಾರಕ್ಕೆ ಸಲ್ಲಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

**ನಿರ್ಣಯ** : ಸದರಿ ವಾರ್ಷಿಕ ವರದಿಗಳನ್ನು ಸಭೆಯು ಪರಿಶೀಲಿಸಿ ಮುದ್ರಣ ಕಾರ್ಯಗಳನ್ನು ಕೈಗೊಳ್ಳಲು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು.

**೨೨೧.೦೫** ದಿನಾಂಕ ೨೭.೦೯.೨೦೨೩ರಂದು ನಡೆದ ೨೦೨೩-೨೪ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿ ಕುರಿತು.

ಟಿಪ್ಪಣಿ : ದಿನಾಂಕ ೨೭.೦೯.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೩-೨೪ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ದಿನಾಂಕ ೨೭.೦೯.೨೦೨೩ರಂದು ಕನ್ನಡ ವಿಶ್ವವಿದ್ಯಾಲಯದ ಪ್ರಾದೇಶಿಕ ಕಚೇರಿ, ಬೆಂಗಳೂರಿನಲ್ಲಿ ನಡೆದ ೨೦೨೩-೨೪ನೇ ಸಾಲಿನ ಮೊದಲನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು**

೨೨೧.೦೬ ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯದ ಮೊದಲನೇ ಮಹಡಿಯಲ್ಲಿ ಬಾತ್‌ರೂಮ್ ಹಾಗೂ ಶೌಚಾಲಯ ರೂಮ್‌ಗಳನ್ನು ನಿರ್ಮಿಸುವ ಬಗ್ಗೆ ಮುಖ್ಯಸ್ಥರು, ತಾಂತ್ರಿಕ ವಿಭಾಗ ಇವರು ನೀಡಿರುವ ಪ್ರಸ್ತಾವದ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅನುದಾನದಿಂದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಸತಿನಿಲಯದಲ್ಲಿ ನೆಲಮಹಡಿ ಮತ್ತು ಮೊದಲನೇ ಮಹಡಿಯನ್ನು ನಿರ್ಮಿಸಲಾಗಿದೆ. ನೆಲಮಹಡಿಯಲ್ಲಿ ೨೦ ರೂಮ್‌ಗಳಿರುತ್ತದೆ. ಮೊದಲನೇ ಮಹಡಿಯಲ್ಲಿ ೨೧ ರೂಮ್‌ಗಳಿರುತ್ತದೆ. ನೆಲಮಹಡಿಯಲ್ಲಿ ಬಾತ್‌ರೂಮ್ ಮತ್ತು ಶೌಚಾಲಯ ರೂಮ್‌ಗಳನ್ನು ನಿರ್ಮಿಸಲಾಗಿದೆ. ಮೊದಲನೇ ಮಹಡಿಯಲ್ಲಿ ಬಾತ್‌ರೂಮ್ ಮತ್ತು ಶೌಚಾಲಯ ರೂಮ್‌ಗಳು ಇರುವುದಿಲ್ಲ. ನೆಲಮಹಡಿಯಲ್ಲಿ ಬಾತ್‌ರೂಮ್ ಮತ್ತು ಶೌಚಾಲಯ ರೂಮ್‌ಗಳನ್ನು ನಿರ್ಮಿಸಿದಂತೆ ಮೊದಲನೇ ಮಹಡಿಯಲ್ಲಿ ಬಾತ್‌ರೂಮ್ ಮತ್ತು ಶೌಚಾಲಯ ರೂಮ್‌ಗಳನ್ನು ನಿರ್ಮಿಸಲು ಅಂದಾಜು ಮೊತ್ತ ರೂ. ೪೫,೦೦,೦೦೦/- (ರೂ. ನಲವತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳಾಗುತ್ತದೆ. ಈ ಮೊತ್ತವನ್ನು ಎಸ್‌ಸಿಪಿ ಅನುದಾನದಲ್ಲಿ ನಿರ್ಮಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಚರ್ಚಿಸಿ ಅನುದಾನ ಲಭ್ಯತೆಯನುಸಾರ ಬಾತ್‌ರೂಮ್ ಮತ್ತು ಶೌಚಾಲಯ ರೂಮ್‌ಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಿತು.

೨೨೧.೦೭ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ವಸತಿನಿಲಯದ, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಸತಿ ನಿಲಯದ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ವಸತಿನಿಲಯದ ಪಕ್ಕದಲ್ಲಿ ಮೂರು ದ್ವಿಚಕ್ರ ವಾಹನಗಳ ಶೆಡ್ ನಿರ್ಮಿಸುವ ಕುರಿತು.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ಆವರಣದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಅನುದಾನದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರ ವಸತಿನಿಲಯ, ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಸತಿ ನಿಲಯದ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಮೂರು ವಸತಿನಿಲಯಗಳನ್ನು ನಿರ್ಮಿಸಲಾಗಿದೆ. ಈ ಮೂರು ವಸತಿನಿಲಯದ ಪಕ್ಕದಲ್ಲಿ ವಿದ್ಯಾರ್ಥಿಗಳ ದ್ವಿಚಕ್ರ ವಾಹನಗಳ ಶೆಡ್ ನಿರ್ಮಿಸಲು ಯೋಜಿಸಲಾಗಿದೆ. ಒಂದು ದ್ವಿಚಕ್ರ ವಾಹನಗಳ ನಿಲುಗಡೆ ಶೆಡ್‌ಗೆ ಅಂದಾಜು ವೆಚ್ಚದ ಮೊತ್ತ ರೂ. ೪,೯೭,೨೨೧/-ಗಳಾಗುತ್ತವೆ. ಮೂರು ದ್ವಿಚಕ್ರ ವಾಹನಗಳ ನಿಲುಗಡೆ ಶೆಡ್‌ಗೆ ಒಟ್ಟು ಅಂದಾಜು ಮೊತ್ತ ರೂ. ೧೪,೯೧,೬೬೩/-ರೂ. (ಹದಿನಾಲ್ಕು ಲಕ್ಷದ ತೊಂಭತ್ತೊಂದು ಸಾವಿರದ ಆರುನೂರ ಅರವತ್ಮೂರು) ಮಾತ್ರ ಗಳಾಗುತ್ತದೆ. ಸದರಿ ಮೊತ್ತವನ್ನು ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನದಲ್ಲಿ ನಿರ್ಮಿಸಲು ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಚರ್ಚಿಸಿ ಕಟ್ಟಡದ ಅಂದ ಕೆಡದ ಹಾಗೆ ದ್ವಿಚಕ್ರವಾಹನಗಳ ಶೆಡ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಿತು.

೨೨೧.೦೮ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಸ್ಥಾಪಿಸುವ ಪ್ರಸ್ತಾವನೆ ಕುರಿತು.

ಟಿಪ್ಪಣಿ : ಕರ್ನಾಟಕದ ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯವು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಸಂಬಂಧಿತ ಅಧ್ಯಯನ ಕ್ಷೇತ್ರಗಳನ್ನು ಉತ್ತೇಜಿಸುವಲ್ಲಿ ಮುಂಚೂಣಿಯಲ್ಲಿದೆ. ಅದರ ಧ್ಯೇಯೋದ್ದೇಶಗಳನ್ನು ಮತ್ತಷ್ಟು ಹೆಚ್ಚಿಸಲು ಮತ್ತು ಅದರ ಶೈಕ್ಷಣಿಕ ಕೊಡುಗೆಗಳ ವಿಸ್ತರಣೆ, ಜ್ಞಾನ ಪ್ರಸರಣ, ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಹಾಗೂ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ನೂತನವಾಗಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗವನ್ನು ಸ್ಥಾಪಿಸಲು (ದಿನಾಂಕ ೦೫.೦೭.೨೦೨೩ರಂದು ನಡೆದ ಗ್ರಂಥಾಲಯ ಸಲಹಾ ಸಮಿತಿಯು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿದೆ.) ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಈ ಕುರಿತು ಸಭೆಯು ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ ಆರಂಭಿಸುವ ಸಂಬಂಧ ನಿಯಮಾನುಸಾರ ಅನುಶಾಸನವನ್ನು ಸಿದ್ಧಪಡಿಸಲು ಅನುಮೋದನೆ ನೀಡಿತು.

೨೨೧.೦೯ ದಿವಂಗತ ಶ್ರೀ ಗಂಗಾಧರ(ತಂದೆ ಶಿರಿವಲ್ಲಯ್ಯ), ಕಸಗುಡಿಸುವವರು ಇವರ ಅವಲಂಬಿತ ಕುಟುಂಬ ಸದಸ್ಯರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತು.

ಟಿಪ್ಪಣಿ : ದಿವಂಗತ ಶ್ರೀ ಗಂಗಾಧರ, ಕಸಗುಡಿಸುವವರು ಇವರ ಪತ್ನಿಯಾದ ಶ್ರೀಮತಿ ಗಂಗಮ್ಮ ಇವರು ದಿನಾಂಕ ೧೯.೦೮.೨೦೨೩ರ ಪತ್ರದ ಮೂಲಕ ಅವರ ಮಗನಾದ ಶ್ರೀ ಪ್ರಶಾಂತ ಅವರಿಗೆ ೧೮ ವರ್ಷ ವಯಸ್ಸು ತುಂಬಿದ ನಂತರ ಅನುಕಂಪದ ಆಧಾರದಲ್ಲಿ ಖಾಯಂ ನೌಕರಿಯನ್ನು ನೀಡಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ.
ಮಾನ್ಯ ಕುಲಪತಿಗಳು ಸದರಿಯವರ ಮನವಿಯನ್ನು ಪರಿಗಣಿಸಿ ೧೮ ವರ್ಷ ತುಂಬುವವರೆಗೆ ಈ ಅವಕಾಶವನ್ನು ಕಾಯ್ದಿರಿಸುವಂತೆ ದಿನಾಂಕ ೦೧.೦೯.೨೦೨೩ರಂದು ಒಪ್ಪಿಗೆ ನೀಡಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ವಿಶ್ವವಿದ್ಯಾಲಯದಲ್ಲಿ ರಿಕ್ತವಾಗಿರುವ ಹುದ್ದೆಗಳನ್ನು ಅನುಲಕ್ಷಿಸಿ, ಅವಲಂಬಿತ ಅರ್ಜಿದಾರರ ವಿದ್ಯಾರ್ಹತೆಗೆ ತಕ್ಕಂತೆ ನಿಯಮಾನುಸಾರ ಅನುಕಂಪ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.

೨೨೧.೧೦ ಶ್ರೀ ಅಜಿತ್ ಹಡಪದ ಇವರ ನಿವೃತ್ತಿ ವೇತನದ ಆರ್ಥಿಕ ಸೌಲಭ್ಯಗಳ ಪಾವತಿ ಕುರಿತು.

ಟಿಪ್ಪಣಿ :
* ಆದೇಶ ಸಂಖ್ಯೆ:ಕವಿಹಂ:ಕುಸ:೦೨:ಹಕಾವಿ:೦೪:ವನಿ:ವೇನಿ:೨೦೨೩-೨೪/ದಿನಾಂಕ:೨೦.೦೯.೨೦೨೩ರನ್ವಯ ಶ್ರೀ ಅಜಿತ್ ಹಡಪದ ಅವರ ನಿವೃತ್ತಿ ವೇತನ ಸೌಲಭ್ಯಗಳ ಆದೇಶವನ್ನು ಸಿದ್ಧಪಡಿಸಲಾಗಿದೆ. ಈ ಆದೇಶದನ್ವಯ ಸದರಿಯವರ ಮೂಲವೇತನ ರೂ.೩೧೧೦೦/-ಕ್ಕೆ ನಿಗದಿಗೊಳಿಸಿ ನಿವೃತ್ತಿ ವೇತನದ ಎಲ್ಲ ಆರ್ಥಿಕ ಸೌಲಭ್ಯಗಳನ್ನು ಲೆಕ್ಕಾಚಾರ ಮಾಡಲಾಗಿದೆ.
* ದಿನಾಂಕ:೨೧.೦೯.೨೦೨೩ರಂದು ಶ್ರೀ ಅಜಿತ್ ಹಡಪದ ಅವರು ಪತ್ರವನ್ನು ನೀಡಿದ್ದು, ಅದರಲ್ಲಿ ನಿವೃತ್ತಿ ಸಂದರ್ಭದಲ್ಲಿದ್ದ ಮೂಲ ವೇತನ ರೂ.೩೬೯೫೦/-ಗಳಿಗೆ ಲೆಕ್ಕಾಚಾರ ಮಾಡಿ ನಿವೃತ್ತಿ ವೇತನದ ಆರ್ಥಿಕ ಸೌಲಭ್ಯಗಳನ್ನು ನೀಡುವಂತೆ ಕೋರಿದ್ದಾರೆ.
* ಶ್ರೀ ಅಜಿತ್ ಹಡಪದ ಅವರ ಸೇವಾಪುಸ್ತಕದಲ್ಲಿ ನಮೂದಿಸಿರುವ ದಾಖಲೆಯನ್ವಯ ನಿಯಮಾನುಸಾರ ಪರಿಶೀಲಿಸಲಾಗಿ ಕಿರಿಯ ಸಹಾಯಕರಾಗಿ ೨೦೦೪ರಿಂದ ಅನ್ವಯವಾಗುವಂತೆ ಮುಂಬಡ್ತಿ ನೀಡಿದ್ದು, ಸರ್ಕಾರದ ವೇತನಶ್ರೇಣಿಯನ್ವಯ ಕಿರಿಯ ಸಹಾಯಕರ ಆರಂಭದ ಮೂಲವೇತನ ರೂ.೩೦೦೦/- ನಿಗದಿಗೊಳಿಸಬೇಕಾಗಿತ್ತು ಆದರೆ ಸದರಿಯವರಿಗೆ ಆದೇಶ ಸಂಖ್ಯೆ:ಕವಿಹಂ:ಕುಸ:೦೨:ಹಕಾವಿ:೦೪:ವೇನಿ:೨೦೨೨-೨೩/೯೪/ದಿನಾಂಕ:೦೯.೦೬.೨೦೨೨ರನ್ವಯ ಕಿರಿಯ ಸಹಾಯಕರ ಹುದ್ದೆಯ ಆರಂಭದ ಮೂಲವೇತನ ರೂ.೩೦೦೦/-ಕ್ಕೆ ಬದಲಾಗಿ ರೂ.೩೫೫೦/-ಕ್ಕೆ ನಿಗದಿಗೊಳಿಸಲಾಗಿದೆ. ಈ ಕಾರಣದಿಂದಾಗಿ ರೂ.೫೫೦/- ವೇತನ ಬಡ್ತಿ ದರದಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಹೆಚ್ಚುವರಿಯಾಗಿ ನೀಡಲಾಗಿದೆ.
* ಮುಂದುವರೆದು ಸದರಿಯವರಿಗೆ ಕಿರಿಯ ಸಹಾಯಕರ ಹುದ್ದೆಗೆ ಮುಂಬಡ್ತಿ ಪಡೆದ ಸಂದರ್ಭದಲ್ಲಿ ವೇತನ ನಿಗದೀಕರಣದನ್ವಯ ೨೦೦೪ರಿಂದ ಅನ್ವಯಿಸುವಂತೆ ರೂ.೩೫೫೦/- ಮೂಲವೇತನದ ಆಧಾರದ ಮೇಲೆ ಬಾಕಿ ವೇತನದ ಮೊತ್ತ ರೂ.೬,೮೧,೦೬೧/-ಗಳನ್ನು ೨೦೨೨-೨೩ನೇ ಸಾಲಿನಲ್ಲಿ ಪಾವತಿಸಲಾಗಿದೆ.
* ಈ ಹಿನ್ನೆಲೆಯಲ್ಲಿ ಕುಲಸಚಿವರ ಆದೇಶ ಸಂಖ್ಯೆ:ಕವಿಹಂ:ಕುಸ:೦೨:ಹಕಾವಿ:೦೪:ವನಿ:ವೇನಿ:೨೦೨೩-೨೪/ ದಿನಾಂಕ:೨೦.೦೯.೨೦೨೩ ರನ್ವಯ ಹೊರಡಿಸಿದ ನಿವೃತ್ತಿ ವೇತನದ ಆರ್ಥಿಕ ಸೌಲಭ್ಯಗಳ ಆದೇಶವನ್ನು ಜಾರಿಗೊಳಿಸುವ ಬಗ್ಗೆ ಮತ್ತು ಸದರಿಯವರು ಸಲ್ಲಿಸಿದ ಮನವಿಯ ಕುರಿತು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ದಿನಾಂಕ:೨೦.೦೯.೨೦೨೩ ರಂದು ಸಿದ್ಧಪಡಿಸಲಾದ ಆದೇಶದಂತೆ ನಿಯಮಾನುಸಾರ ಆರ್ಥಿಕ ಸೌಲಭ್ಯಗಳನ್ನು ಜಾರಿಗೊಳಿಸಲು ಅನುಮೋದನೆ ನೀಡಿತು.

೨೨೧.೧೧ ಬೃಹದ್ದೇಶಿ ಗ್ರಂಥವನ್ನು ಪರಿಷ್ಕರಿಸಿ ಮುದ್ರಿಸುವ ಕುರಿತು.

ಟಿಪ್ಪಣಿ : ಹಿಂದಿನ ಸರ್ಕಾರದ ಅವಧಿಯಲ್ಲಿ ಪ್ರಕಟವಾಗಿರುವ ಬೃಹದ್ದೇಶಿ ಗ್ರಂಥದ ಪರಿಷ್ಕೃತ ಆವೃತ್ತಿಯನ್ನು ಹೊಸ ಸರ್ಕಾರದ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರ ಮಾತುಗಳನ್ನು ಹೊಸದಾಗಿ ಸೇರ್ಪಡೆ ಮಾಡಿಕೊಂಡು ನೂರು ಪ್ರತಿಗಳನ್ನು ಮತ್ತೊಮ್ಮೆ ಮುದ್ರಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಚರ್ಚಿಸಿ ಈ ಯೋಜನೆಯಲ್ಲಿ ಲಭ್ಯವಿರುವ ಅನುದಾನದಿಂದ ಬೃಹದ್ದೇಶಿ ಗ್ರಂಥವನ್ನು ಪರಿಷ್ಕರಿಸಿ ಮುದ್ರಿಸಲು ಅನುಮೋದನೆ ನೀಡಿತು.

೨೨೧.೧೨ ಕನ್ನಡ ವಿಶ್ವವಿದ್ಯಾಲಯದಲ್ಲಿ ಮತಂಗ ಕಲೆ ಮತ್ತು ಸಂಸ್ಕೃತಿ ಸಂಶೋಧನೆ ಕೇಂದ್ರ ಸ್ಥಾಪನೆಗಾಗಿ ಸರ್ಕಾರಕ್ಕೆ ಪ್ರಸ್ತಾವವನ್ನು ಸಿದ್ಧಪಡಿಸಿ ಸಲ್ಲಿಸುವ ಕುರಿತು.

ನಿರ್ಣಯ : ಈ ಕುರಿತು ಸಭೆಯು ಚರ್ಚಿಸಿ ಮತಂಗ ಕಲೆ ಮತ್ತು ಸಂಸ್ಕೃತಿ ಸಂಶೋಧನೆ ಕೇಂದ್ರ ಸ್ಥಾಪನೆಗಾಗಿ ಪ್ರಸ್ತಾವವನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಅನುಮೋದನೆ ನೀಡಿತು.

೨೨೧.೧೩ ಕುವೆಂಪು ಸಾಹಿತ್ಯ ಸರಣಿಯ ೧೨ ಸಂಪುಟಗಳ ಡಿಜಿಟಲೀಕರಣ ಆವೃತ್ತಿಗೆ ಸಂಬಂಧಪಟ್ಟಂತೆ ಕುವೆಂಪು ಅವರ ಪುತ್ರಿ ಶ್ರೀಮತಿ ತಾರಿಣಿ ಚಿದಾನಂದ ಅವರೊಂದಿಗೆ ಕರಾರು ಪತ್ರಕ್ಕೆ ಸಹಿ ಮಾಡಿಸಿಕೊಳ್ಳುವ ಕುರಿತು.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಕುವೆಂಪು ಸಾಹಿತ್ಯ ಸರಣಿಯ ೧೨ ಸಂಪುಟಗಳ ಡಿಜಿಟಲ್ ಆವೃತ್ತಿಗೆ ಸಂಬಂಧಪಟ್ಟಂತೆ ಕುವೆಂಪು ಅವರ ಪುತ್ರಿ ಶ್ರೀಮತಿ ತಾರಿಣಿ ಚಿದಾನಂದ ಅವರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲು ಅನುಮೋದನೆ ನೀಡಿತು.

೨೨೧.೧೪ ಮಾನ್ಯ ಕುಲಪತಿಗಳ ಗೃಹಕಚೇರಿಗೆ ಬಿಸಿಲಿನಿಂದ ರಕ್ಷಣೆ ಪಡೆಯುವ ಸಲುವಾಗಿ ಮೇಲ್ಛಾವಣಿಗೆ ಕೂಲ್‌ಟೈಲ್ಸ್ ಅಳವಡಿಸುವ ಮತ್ತು ಇತರೆ ಸಣ್ಣಪುಟ್ಟ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವ ಕುರಿತು.

ನಿರ್ಣಯ : ಸದರಿ ವಿಷಯದ ಕುರಿತು ಸಭೆಯು ಚರ್ಚಿಸಿ ಮಾನ್ಯ ಕುಲಪತಿಗಳ ಗೃಹಕಚೇರಿಗೆ ಬಿಸಿಲಿನಿಂದ ರಕ್ಷಣೆ ಪಡೆಯುವ ಸಲುವಾಗಿ ಮೇಲ್ಛಾವಣಿಗೆ ಕೂಲ್‌ಟೈಲ್ಸ್ ಅಳವಡಿಸುವ ಮತ್ತು ಇತರೆ ಸಣ್ಣಪುಟ್ಟ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲು ಅನುಮೋದನೆ ನೀಡಿತು.

೨೨೧.೧೫ ತಾತ್ಕಾಲಿಕ ಸಿಬ್ಬಂದಿ ನಿಯೋಜನೆ ಮತ್ತು ವೇತನ ಪಾವತಿ ಕುರಿತು.

ನಿರ್ಣಯ : ಸರ್ಕಾರದಿಂದ ಅನುಮತಿ ಪಡೆಯದೇ ತಾತ್ಕಾಲಿಕ ಸಿಬ್ಬಂದಿಯನ್ನು ನೇಮಕಮಾಡಿಕೊಂಡಿರುವ ಬಗ್ಗೆ ಪದೇ ಪದೇ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ಹಣಕಾಸು ಇಲಾಖೆಯಿಂದ ಆಕ್ಷೇಪಣೆಗಳು ವ್ಯಕ್ತವಾಗುತ್ತಿದ್ದು, ಸದರಿ ಸಿಬ್ಬಂದಿಗಳನ್ನು ಸೇವೆಯಿಂದ ಬಿಡುಗಡೆಗೊಳಿಸುವಂತೆ ನಿರ್ದೇಶನ ನೀಡುತ್ತಿರುವುದನ್ನು ಸಭೆಯ ಪರಿಶೀಲಿಸಿ ಸದರಿ ಸಮಸ್ಯೆಗಳ ಕುರಿತು ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುವ ಸಲುವಾಗಿ ಈ ಕೆಳಕಂಡ ಸಮಿತಿಯೊಂದನ್ನು ರಚಿಸಲು ಸಭೆ ತೀರ್ಮಾನಿಸಿತು.

| | |
|---|---|
| ೧. ಡೀನ್ ಭಾಷಾನಿಕಾಯ, ಕವಿಹಂ | – ಅಧ್ಯಕ್ಷರು |
| ೨. ಕುಲಸಚಿವರು, ಕವಿಹಂ | – ಸದಸ್ಯರು |
| ೩. ಉಪನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಬುರ್ಗಿ ವಿಭಾಗ, ಕಲಬುರ್ಗಿ | – ಸದಸ್ಯರು |
| ೪. ಹಣಕಾಸು ಅಧಿಕಾರಿಗಳು, ಕವಿಹಂ | – ಸದಸ್ಯರು |
| ೫. ಉಪಕುಲಸಚಿವರು (ಆಡಳಿತ), ಕವಿಹಂ | – ಸದಸ್ಯ ಸಂಚಾಲಕರು |

ಕುಲಸಚಿವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು